# ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

**ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ. 23/2025**

**ಪಿರ್ಯಾದಿ** – ಸರ್ಕಾರದ ಪರವಾಗಿ **ಹೊಳಲ್ಕೆರೆ ಪೊಲೀಸರು**.

**– ವಿರುದ್ಧ –**

**ಆರೋಪಿ** – **ಮಂಜುನಾಥ ಜಿ.ಕೆ. ಬಿನ್ ಕುಬೇರಪ್ಪ,**
ವಯಸ್ಸು: 25 ವರ್ಷ, ಡ್ರೈವರ್ ಕೆಲಸ,
ವಾಸ: ಕೊಡಗವಳ್ಳಿ ಗ್ರಾಮ, ಹೊಳಲ್ಕೆರೆ ತಾ. ಚಿತ್ರದುರ್ಗ ಜಿಲ್ಲೆ

## —::_ದೋಷಾರೋಪಣೆ ::—

***ಶ್ರೀ ಗಂಗಾಧರ ಚನ್ನಬಸಪ್ಪ ಹಡಪದ**, ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿತ್ರದುರ್ಗ* ಆದ ನಾನು

**ಆರೋಪಿಯಾದ** ನಿಮ್ಮನ್ನು ಈ ಕೆಳಕಂಡ ಆರೋಪಣೆಗೆ ಒಳಪಡಿಸುತ್ತೇನೆ.

ಆರೋಪಿಯಾದ ನೀನು ಲಿಂಗಾಯತ ಜನಾಂಗಕ್ಕೆ ಸೇರಿದ್ದು, ನಾಯಕ ಜನಾಂಗಕ್ಕೆ ಸೇರಿದ ಚಾಸಾ:1 ರವರ ಮಗಳಾದ ಮೃತೆ ಡಿ. ಆಶಾರವರೊಂದಿಗೆ ಹಣದ ವ್ಯವಹಾರ ಮತ್ತು ಅಕ್ರಮ ಸಂಬಂಧ ಹೊಂದಿದ್ದು, ಸದರಿ ಆಶಾಳು ನಿಮಗೆ ಈ ಹಿಂದೆ ರೂ. 10,000/–ಗಳನ್ನು ಕೈಗಡ ಕೊಟ್ಟ ಹಣವನ್ನು ವಾಪಸ್ಸು ಕೇಳಿದ್ದಕ್ಕೆ, ಆಕೆಯನ್ನು ಕೊಲೆ ಮಾಡುವ ಉದ್ದೇಶದಿಂದ ದಿನಾಂಕ 14.4.2025 ರಂದು ರಾತ್ರಿ 8 ಗಂಟೆಯಲ್ಲಿ ಹೊಳಲ್ಕೆರೆ ತಾಲೂಕ ರಾಮಘಟ್ಟ ಗ್ರಾಮದಿಂದ ಹಣವನ್ನು ಕೊಡುತ್ತೇನೆ ಬಾ ಎಂದು ಹೇಳಿ ನಿನ್ನ ಬೈಕ್ ನಂ. ಕೆಎ–16–ಇಎಕ್ಸ್–3124 ನೇ ಬೈಕಿನಲ್ಲಿ ಕೂರಿಸಿಕೊಂಡು ಅದೇ ದಿನ ರಾತ್ರಿ 8 ಗಂಟೆಯಿಂದ 9 ಗಂಟೆಯ ಮಧ್ಯದಲ್ಲಿ ಹೊಳಲ್ಕೆರೆ ತಾಲೂಕ ಕೆಂಗುಂಟೆ ಮತ್ತು ದಾಸಿಕಟ್ಟೆ ಗ್ರಾಮಗಳ ಮಧ್ಯದಲ್ಲಿರುವ ನಿರ್ಜನ ಪ್ರದೇಶವಾದ ಜಾನುವಾರು ಗೋಮಾಳ ಜಾಗಕ್ಕೆ ಕರೆದುಕೊಂಡು ಹೋಗಿ ಸದರಿ ಆಶಾಳನ್ನು ಕೊಲೆ ಮಾಡುವ ಉದ್ದೇಶದಿಂದ ಎರಡು ಕಲ್ಲುಗಳಿಂದ ಅವಳ ತಲೆಗೆ ಬಲವಾಗಿ ಹೊಡೆದು ರಕ್ತಗಾಯಪಡಿಸಿ ಕೊಲೆ ಮಾಡಿದ್ದು, **ನನ್ನ ಸಂಜ್ಞಾನಕ್ಕೆ**

**ಬರುವ ಭಾರತೀಯ ನ್ಯಾಯ ಸಂಹಿತೆ ಕಲಂ** 103(1)ರ **ಅಡಿ** ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಲಿಂಗಾಯತ ಜನಾಂಗಕ್ಕೆ ಸೇರಿದ ಆರೋಪಿಯಾದ ನೀನು ಚಾಸಾ-1 ರವರ ಮಗಳು ಮೃತ ಆಶಾ ನಾಯಕ ಜನಾಂಗದ ಪರಿಶಿಷ್ಟ ಪಂಗಡಕ್ಕೆ ಸೇರಿದವಳು ಎಂದು ತಿಳಿದಿದ್ದು, ಅವರ ವಿರುದ್ಧ ಮೇಲೆ ಹೇಳಿದ ಅಪರಾಧಿಕ ಕೃತ್ಯಗಳನ್ನುಎಸಗಿದ್ದು, **ನನ್ನ ಸಂಜ್ಞಾನಕ್ಕೆ ಬರುವ ಎಸ್‌ಸಿ/ಎಸ್‌ಟಿ ದೌಜನ್ಯ ತಡೆ ಕಾಯಿದೆ** 3(2) **(V) ಅಡಿ** ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಈ ಮೇಲಿನ ಆಪಾದನೆಗಳಿಗೆ ನಿಮ್ಮ ಮೇಲೆ ವಿಚಾರಣೆ ನಡೆಸಲಾಗುವುದು.

**(ಗಂಗಾಧರ ಚನ್ನಬಸಪ್ಪ ಹಡಪದ)**
ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.